# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:28-09-2022ರಂದು ಬುಧವಾರ ಅಪರಾಹ್ನ 12-30 ಘಂಟೆಗೆ ವಿಶ್ವವಿದ್ಯಾಲಯದ ನೂತನ ಸಿಂಡಿಕೇಟ್ ಸಭಾಂಗಣದಲ್ಲಿ ಆನ್ -ಲೈನ್ ಮೂಲಕ ನಡೆದ 2022-23ರ ಹಣಕಾಸು ವರ್ಷದ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | | ಪದನಾಮ |
|---|---|---|
| 01. | **ಪ್ರೊ. ಬಿ.ಪಿ. ವೀರಭದ್ರಪ್ಪ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 02. | **ಶ್ರೀಮತಿ ಉಮಾ. ಕೆ**<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 03. | **ಶ್ರೀ ಎಂ.ಜಿ. ವೆಂಕಟೇಶಯ್ಯ**<br>ಉಪಕಾರ್ಯದರ್ಶಿಗಳು (ಉನ್ನತ ಶಿಕ್ಷಣ)<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 04. | **ಶ್ರೀ ಗುರುರಾಜ್ ರಾವ್**<br>ಹಿರಿಯ ನಿರ್ದೇಶಕರು ಹಾಗೂ<br>ಪದನಿಮಿತ್ತ ಜಂಟಿ ಕಾರ್ಯದರ್ಶಿ<br>ಯೋಜನಾ ಇಲಾಖೆ<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 05. | **ಶ್ರೀ ಜಿ. ಧರ್ಮಪ್ರಸಾದ್**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 06. | **ಶ್ರೀ ಕುಮಾರೇಗೌಡ**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 07. | **ಶ್ರೀಮತಿ ಅನುರಾಧ. ಜಿ.** ಕೆ.ಎ.ಎಸ್. (ಹಿರಿಯ ಶ್ರೇಣಿ)<br>ಕುಲಸಚಿವರು | ಸದಸ್ಯರು. |
| 08. | **ಪ್ರೊ. ಎಸ್.ಕೆ. ನವೀನ್‌ಕುಮಾರ್**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 09. | **ಶ್ರೀ ಎಸ್. ರಾಮಕೃಷ್ಣ,** ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯದ 2022-23ನೇ ಹಣಕಾಸು ವರ್ಷದ ವಿಶೇಷ ಹಣಕಾಸು ಸಮಿತಿ ಸಭೆಗೆ ಆನ್‌ಲೈನ್ ಮೂಲಕ ಮಾನ್ಯ ಕುಲಪತಿಗಳಿಗೆ ಮತ್ತು ಇತರೆ ಸದಸ್ಯರುಗಳಿಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2022-ವಿಹಸ:01: | **The Statutes Relating to Appointment and Promotion of Teachers and Other Academic Staff and Measures for the Maintenance of Standards in Higher Education in the Kuvempu University , As per the UGC Regulations-2018.** |
| ಚರ್ಚೆ | ಮಾನ್ಯ ಕುಲಸಚಿವರು ಆಡಳಿತ ಇವರು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧದ **The Statutes Relating to Appointment and Promotion of Teachers and Other Academic Staff and Measures for the Maintenance of Standards in Higher Education in the Kuvempu University , As per the UGC Regulations-2018.** ಪರಿನಿಯಮಾವಳಿಗಳನ್ನು ಅನುಮೋದನೆಗಾಗಿ ಮಾನ್ಯ ಕುಲಸಚಿವರು ಸಭೆಗೆ ಮಂಡಿಸಿದರು.<br>ಮಾನ್ಯ ಕುಲಸಚಿವರು ಮಾತಾನಾಡುತ್ತಾ, ಸದರಿ ಪರಿನಿಯಮವನ್ನು ಉನ್ನತ ಶಿಕ್ಷಣ ಪರಿಷತ್ ತಜ್ಞರ ಸಮಿತಿಯಿಂದ ಸಿದ್ಧಪಡಿಸಿ ವಿಶ್ವವಿದ್ಯಾಲಯಗಳ ಅನುಮೋದನೆಗಾಗಿ ಉನ್ನತ ಶಿಕ್ಷಣ ಇಲಾಖೆಯವರು ಕಳುಹಿಸಿಕೊಟ್ಟಿರುತ್ತಾರೆ.<br>ಯು. ಜಿ. ಸಿ. ನಿಯಮಾವಳಿ 2018ರನ್ವಯ ಈ ನಿಯಮವನ್ನು ರಚಿಸಲಾಗಿದ್ದು, ಪರಿನಿಯಮದ ಟೇಬಲ್ 6(ಬಿ) ಪ್ರಕಾರ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ 50 ಅಂಕಗಳಿಗೆ ಪ್ರವೇಶ ಪರೀಕ್ಷೆಯನ್ನು ನಡೆಸಲು ಹಾಗೂ ಉಳಿದ ಅಂಶಗಳಿಗೆ ಸಂಬಂಧಿಸಿದ ಅಂಕಗಳನ್ನು ಒಳಗೊಂಡಂತೆ ಒಟ್ಟು 112 ಅಂಕಗಳನ್ನು ಈ ನೇಮಕಾತಿ ಪ್ರಕ್ರಿಯೆಯಲ್ಲಿ ನಿಗಧಿಪಡಿಸಲಾಗಿದೆ ಎಂಬ ಅಂಶವನ್ನು ಸಭೆಗೆ |

| | |
|---|---|
| | ತಿಳಿಸಿದರು. ಈ ಪರಿನಿಯಮವು ಈಗಾಗಲೇ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ ಹಾಗೂ ಹಣಕಾಸು ಸಮಿತಿ ಸಭೆಯ ಅನುಮೋದನೆಯನ್ನು ನೀಡಲು ಕೋರಿದರು. ನಂತರ ಆನ್‌ಲೈನ್ ಮೂಲಕ ಸಭೆಯಲ್ಲಿ ಪಾಲ್ಗೊಂಡ ಶ್ರೀ ಧರ್ಮಪ್ರಸಾದ.ಜಿ. ಸಿಂಡಿಕೇಟ್ ಸದಸ್ಯರು ಮತ್ತು ಶ್ರೀ. ಕುಮಾರೇಗೌಡ. ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಇವರುಗಳು ಮಾತನಾಡಿ ಸರ್ಕಾರದಿಂದ ಸಿದ್ದಪಡಿಸಿರುವ ಸದರಿ ಪರಿನಿಯಮವನ್ನು ಅನುಮೋದಿಸಬಹುದೆಂದು ಒಪ್ಪಿಗೆ ಸೂಚಿಸಿದರು. |
| ನಿರ್ಣಯ: | **The Statutes Relating to Appointment and Promotion of Teachers and Other Academic Staff and Measures for the Maintenance of Standards in Higher Education in the Kuvempu University , As per the UGC Regulations-2018.** ಈ ಪರಿನಿಯಮವನ್ನು ಸಭೆಯು ಸುಧೀರ್ಘವಾಗಿ ಚರ್ಚಿಸಿದ ನಂತರ ಯಥಾವತ್ತಾಗಿ ಅನುಮೋದಿಸಲಾಯಿತು. |
| 2022-ವಿಹಸ:02 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:** ಇಲ್ಲಾ |

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

(ಎಸ್. ರಾಮಕೃಷ್ಣ, ಕೆ.ಎಸ್.ಎ.ಎಸ್.)
ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು .

- ಸಹಿ -
(ಪ್ರೊ. ಬಿ.ಪಿ. ವೀರಭದ್ರಪ್ಪ)
ಕುಲಪತಿಗಳು ಹಾಗೂ ಅಧ್ಯಕ್ಷರು.